ಶ್ರೀ ಭೀಮಣ್ಣ ಖಂಡ್ರೆ.—ಆದೇಶ ಹೊರಡಿಸಿದ್ದರೂ ಅದನ್ನು ಕಾರ್ಯಗತ ಮಾಡುತ್ತಿಲ್ಲವೆಂದು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

MR. SPEAKER.—I have seen your notice. I shall look into it and see that it is answered by the Minister sometime later.

(*ii*) *re*: *Proposed strike by Teaching Community.*

SRI A. LAKSHMISAGAR.—Sir, I have two matters to bring to your kind notice. One is that the teaching community have not rescinded their resolve not to go on strike since their demands, have not been settled by the Government. The matter was raised in the earlier session of the Assembly and the Minister said that the representatives of the teachers and also of the legislators would be called and the matter will be looked into and an amicable settlement arrived at. Examinations are fast approaching. I should like to know what the Minister has done, in this behalf. I do not want him to say anything off-hand. It is very difficult Even if he comes prepared it is very difficult to understand him. The second point is that I have given notice under Rule 312 about the allegation made against Sri C. M. Ibrahim I am mentioning .....

MR. SPEAKER.—I have just received. I have not even seen it.

SRI A. LAKSHMISAGAR.—I am not saying that you should take it now. I am only requesting you that this matter may be taken on Monday.

ಶ್ರೀ ಪಿ. ಎನ್. ರೆಡ್ಡಿ.—ಮಾನ್ಯ ಅಧ್ಯಕ್ಷರೇ, ನಾನೊಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನು. ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ ಶ್ರೀ ಕೊಡಗಿಯವರ ಗಮನ ಸೆಳೆಯುವ ಸೂಚನೆಗೆ ಇಂದು ಮಾನ್ಯ ಸಚಿವರು ಹೇಳಿಕೆ ಕೊಡುವವರಿದ್ದಾರೆ. ಆಗ ಅದರ ಮೇಲೆ ನನಗೆ ಸ್ಪಷ್ಟೀಕರಣ ಕೇಳಲು ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ನೋಡೋಣ.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಶಾಸಕರ ಬಗ್ಗೆ ಒಂದು ಅವಮಾನಕರವಾದ ಹೇಳಿಕೆಯನ್ನು ಕೊಟ್ಟಿರುವುದರ ಕುರಿತು ನಾನೊಂದು ಹಕ್ಕುಚ್ಯುತಿಯ ಸೂಚನೆಯೊಂದನ್ನು ತಮಗೆ ಕಳುಹಿಸಿರುವೆನು.

ಅಧ್ಯಕ್ಷರು.—Course of action ಬೇರೆ ಆಗುತ್ತದೆ. ಆ ಮಾತು ಈ ಮನೆಯಲ್ಲಿ ಹೇಳಿದೆ

ಶ್ರೀ ಪಿ. ರಾಂದೇವ್.—ಈ ಮನೆಯಲ್ಲಿ ಹೇಳಿಲ್ಲ. ನಾವು ಶಾಸಕರಾಗಿ ಕೆಲಸ ಮಾಡುವಾಗ ಶಾಸಕರ ಬಗ್ಗೆ ಅವರು ಕೊಟ್ಟಿರುವ ಹೇಳಿಕೆ ಏನಿದೆ ಅದು.....

MR. SPEAKER.—It requires thorough investigation I cannot just allow you to raise it. You also consult books in this matter.

ಶ್ರೀ ಪಿ. ರಾಂದೇವ್.—ಅದನ್ನು ಇನ್ನೊಂದು ದಿವಸ ಪ್ರಸ್ತಾಪ ಮಾಡಲು ತಾವು ದಯವಿಟ್ಟು ಅವಕಾಶ ಕೊಡಬೇಕು.

MR. SPEAKER.—Supposing you say that, it will go into the record. I do not want it to go into the record. I will also make a dep study

of this. If this is a matter of privilege coming within the purview, jurisdiction of this House, I am the last person to shut it. You please study the matter.

(iii) re. : Call off of strike by Public Sector Undertakings employees.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ಕಳೆದ ೭೬ ದಿವಸಗಳಿಂದ ನಡೆಯುತ್ತಿದ್ದ ಕೇಂದ್ರೋದ್ಯಮ ನೌಕರರ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ. ಬಹುಶಃ [ಅವರು ಸೋಮವಾರ ದಿಂದ ಕೆಲಸಕ್ಕೆ ಹೋಗಬಹುದು. ಲಕ್ಷಾಂತರ ಜನ ಪಾಲ್ಗೊಂಡಿದ್ದ ಈ ಮುಷ್ಕರ ವ್ಯವಸ್ಥಿತವಾಗಿ ಇಷ್ಟು ದಿವಸ ನಡೆದು ಶಾಂತ ರೀತಿಯಲ್ಲಿ ಮುಕ್ತಾಯಗೊಂಡಿದೆ, ಎಲ್ಲ ಪಕ್ಷಗಳ ನಾಯಕರು ಮತ್ತು ಮುಖ್ಯ ಮಂತ್ರಿಗಳು ಮಧ್ಯೆ ಪ್ರವೇಶ ಮಾಡಿ, ಮಾಡಿಕೊಂಡ ಮನವಿಗೆ ಓಗೊಟ್ಟು ಕಾರ್ಮಿಕರು ಮುಷ್ಕರವನ್ನು ಹಿಂತೆಗೆದುಕೊಂಡಿದ್ದಾರೆ. ಅವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಗೆ ಎಲ್ಲರೂ ಕೂಡ ಕಾರ್ಖಾನೆಗೆ ಹೋಗುವ ಹಾಗೆ ಮತ್ತು ಹೋದವರ ಮೇಲೆ ಆಡಳಿತವರ್ಗದವರು ಶಿಕ್ಷೆಗೆ ಗುರಿಪಡಿಸುವ ಕ್ರಮ ಕೈಗೊಳ್ಳದೆ, ಸಮಾಧಾನದಿಂದ ಶಾಂತಿ ವಾತಾವರಣ ನಿರ್ಮಾಣವಾಗಲು ನೆರವಾಗುತ್ತಾರೆಂದು ಭಾವಿಸಿಕೊಂಡಿದ್ದೇನೆ. ಮತ್ತೊಮ್ಮೆ, ಮುಷ್ಕರವನ್ನು ಹಿಂತೆಗೆದುಕೊಂಡದ್ದಕ್ಕಾಗಿ ಕಾರ್ಮಿಕರನ್ನು ನಾನು ಅಭಿನಂದಿಸುತ್ತೇನೆ.

ಶ್ರೀ ಬಿ. ಎನ್. ಕೆಂಗೇಗೌಡ.—ಮಾನ್ಯ ಅಧ್ಯಕ್ಷರೇ, ನಾನೊಂದು ಗಮನ ಸೆಳೆಯುವ ಸೂಚನೆ ಯನ್ನು ಕಳುಹಿಸಿದ್ದೆನು. ಅದು ಬಹಳ ಮುಖ್ಯವಾದುದು. ಮಾರ್ಚ್ ತಿಂಗಳ.....

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಕಕ್ಕಿಲಾಯ ಅವರು ಪ್ರಸ್ತಾಪ ಮಾಡಿರುವ ವಿಷಯ ಮುಗಿದ ನಂತರ ತಾವು ಮಾತನಾಡಬಹುದು. ಮಾನ್ಯ ಸದಸ್ಯರಾದ ಶ್ರೀ ಕಕ್ಕಿಲಾಯ ಅವರು ಕಳೆದ ೭೬ ದಿವಸಗಳಿಂದ ನಡೆಯುತ್ತಿದ್ದ ಮುಷ್ಕರವನ್ನು, ಈ ಮನೆಯ ಮತ್ತು ಮೇಲ್ಮನೆಯ ಸದಸ್ಯರು ಹಾಗೂ ಸರ್ಕಾರದವತಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ನೀಡಿದ ಕರೆಗೆ ಓಗೊಟ್ಟು, ಹಿಂತೆಗೆದುಕೊಂಡು ಕೆಲಸಕ್ಕೆ ಹೋಗುವರೆಂದು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ.....

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಸೌಹಾರ್ದಮಯ ವಾತಾವರಣದಲ್ಲಿ ಸಂಪು ಕೂನೆಗೊಂಡಿದೆ. ಇದೇ ವಾತಾವರಣವನ್ನು ಇನ್ನು ಮುಂದೆಯೂ ಮುಂದುವರೆಸುವುದು ಅಗತ್ಯ. ಮುಷ್ಕರ ವನ್ನು ಅಂತ್ಯಗೊಳಿಸಿ ಕೆಲಸಗಳಿಗೆ ಹೋಗುತ್ತಿರುವ ಕಾರ್ಮಿಕರಿಗೆ ವಿಕ್ಟಿಮೈಜೇಷನ್ ಅಥವಾ ಇನ್ನಾವುದೇ ರೀತಿಯ ಕಿರುಕುಳವನ್ನು ಕೊಡದ ಹಾಗೆ ನೋಡಿಕೊಳ್ಳಬೇಕೆಂದು ಈ ಸದನವು ಆಡಳಿತ ವರ್ಗವನ್ನು ಒತ್ತಾಯಿಸುವುದು ಅಗತ್ಯವೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಸಭಾಧ್ಯಕ್ಷರೆ; ಮೊನ್ನೆ ದಿವಸ ಚರ್ಚೆ ಮಾಡುವಾಗ ೧೦೦೦ ಜನರಿಗೆ ಮ್ಯಾನೇಜ್‌ಮೆಂಟ್‌ನವರು ಷೋಕಾಸ್ ನೋಟೀಸ್ ಕೊಟ್ಟಿರುವುದಾಗಿ ತಿಳಿಯಬಂತು. ಈ ಕಾರ್ಮಿಕರ ಮೇಲೆ ಸರ್ಕಾರದವರು ಪೋಲೀಸ್ ಕೇಸುಗಳನ್ನು ಹಾಕಿದ್ದರೆ ಸರ್ಕಾರದವರೇ ತೀರ್ಮಾನ ಮಾಡುತ್ತಾರೆ. ಅದು ಬೇರೆ ವಿಚಾರ. ಆದರೆ ಕಾರ್ಮಿಕರು ನಾಳೆ ಸೋಮವಾರ ಕೆಲಸಕ್ಕೆ ಹೋಗು ವುದರೊಳಗಾಗಿ ಮ್ಯಾನೇಜ್‌ಮೆಂಟ್‌ನವರು ಏನು ಇವರಿಗೆ ಷೋಕಾಸ್ ನೋಟೀಸನ್ನು ಕೊಟ್ಟಿದ್ದಾರೆ ಆದನ್ನು ವಾಪಸು ತೆಗೆದುಕೊಳ್ಳುವಂತೆ ಕ್ರಮ ಕೈಗೊಳ್ಳುವಹಾಗೆ ಮಾಡಬೇಕೆಂದು ಮಾನ್ಯ ಕಾರ್ಮಿಕ ಸಚಿವರನ್ನು ಕೇಳಿಕೊಳ್ಳುತ್ತೇನೆ.

SRI AZEEZ SAIT.—Sir, I also join with the feelings expressed by my hon. friends Sri B. V. Kakkilaya, Sri V. B. Bhavi and Dr. H. L. Thimme Gowda. The workers have a right to strike. The strike is based on certain demands which are genuine. Now the workers have unanimously withdrawn the strike and have agreed to resume work by Monday. Normally, the attitude of managements now is to take some action against the leaders of the working group. Now, there-